ದಿನಾಂಕ 19-01-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎಂ.ಸಿ.ಡಿ., ವಕೀಲರಿಂದಃ-

ನನಗೆ ಇಂಗ್ಲಿಷ್ ಓದಲು ಬರುತ್ತದೆ, ಕನ್ನಡ ಓದಲು ಬರುವುದಿಲ್ಲ. ನಾನು ಜಮೀನುಗಳನ್ನು ತೆಗೆದುಕೊಳ್ಳುವ, ಮಾರಾಟ ಮಾಡುವ ವ್ಯವಹಾರ ಮಾಡುತ್ತೇನೆ. ಹಣ ಸಂದಾಯ ರಶೀದಿಯನ್ನು ಬರೆದುಕೊಡುವವರು ಮಾತ್ರ ಬಾಂಡ್ ಪೇಪರ್ ತೆಗೆದುಕೊಳ್ಳಬೇಕು ಎಂದರೆ ಸಾಕ್ಷಿಯು ಇಬ್ಬರಲ್ಲಿ ಯಾರಾದರೂ ತೆಗೆದುಕೊಳ್ಳಬಹುದು ಎಂದು ನುಡಿಯುತ್ತಾರೆ. ನೀವು ಹಾಜರುಪಡಿಸಿರುವ ನಿಎನ್-1 ಬರೆಸಿಕೊಂಡಿರುವವರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ನಿಎನ್-1ರಲ್ಲಿ 6,00,000/- + 2,40,000/- ಬಡ್ಡಿ ಯಾವ ದಿನಾಂಕ ವಾದಿಗೆ ಕೊಟ್ಟಿದ್ದೀರಿ ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ಅದೇ ರೀತಿ ನಿಎನ್-1ರಲ್ಲಿ 10,00,000/- ಯಾವ ದಿನಾಂಕ ನೀಡಿದ್ದೀರಿ ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ನಿಎನ್-1ರಲ್ಲಿ ನಮೂದಿಸಿರುವ ಹಣವನ್ನು ನಾನು ಯಾವತ್ತೂ ವಾದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಿಎನ್-1ರಲ್ಲಿ ನಿಪಿ-1 ಕರಾರು ಪತ್ರವನ್ನು ರದ್ದು ಮಾಡುವ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಅದೇ ರೀತಿ ದಾನಪತ್ರವನ್ನು ವಾಪಸ್ ಕೊಡುವ ಬಗ್ಗೆಯೂ ಸಹ ನಿಎನ್-1ರಲ್ಲಿ ನಮೂದು ಇಲ್ಲ ಎಂದರೆ ಸರಿ. ನಿಎನ್-1ನ್ನು ವಾದಿ ಬರೆಸಿಕೊಂಡು ಬಂದರು ಎಂದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಿಎನ್-1ಕ್ಕೆ ವಾದಿ ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ನಮ್ಮ ಹಾಗೂ ಸಾಕ್ಷಿದಾರರ ಸಮಕ್ಷಮ ಹಾಕಿಲ್ಲ ಎಂದರೆ ಸರಿಯಲ್ಲ. ವಾದಿ ಪಟಾಕಿ ಬ್ಯುಸಿನೆಸ್ ಮಾಡುತ್ತಾರೆ ಎಂದರೆ ಸರಿ. ವಾದಿಗೆ ಬಾಕಿ ಹಣ 1,00,000/- ಪಾವತಿಸಲು ಸಾಮರ್ಥ್ಯ ಇತ್ತು ಎಂದರೆ ಸರಿಯಲ್ಲ.

ಈ ಕೇಸು ಹಾಕುವ ಮುಂಚೆ ಕರಾರು ರದ್ದಿಯಾತಿ ಮತ್ತು ದಾನಪತ್ರ ವಾಪಸ್ ಪಡೆಯಲು ನೋಟಿಸ್ ಕೊಟ್ಟಿಲ್ಲ, ಸಾಕ್ಷಿಯು ಮುಂದುವರೆದು ಹಣ ಕೊಟ್ಟಿದ್ದೇನೆ, ನೋಟಿಸ್ ಕೊಟ್ಟು ಕೇಸು ಹಾಕಿದರೆ ತಡವಾಗುತ್ತದೆಂದು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ಲಿಖಿತ ಹೇಳಿಕೆ ಹಾಗೂ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿಲ್ಲ. ಲಿಖಿತ ಹೇಳಿಕೆ ಹಾಗೂ ಪ್ರಮಾಣಪತ್ರದಲ್ಲಿ ಹೇಳಲು ತೊಂದರೆ ಇತ್ತಾ ಎಂದರೆ ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಕ್ರಯಪತ್ರ ಬರೆದುಕೊಡಬೇಕಾಗುತ್ತದೆಂದು ನಿಎನ್-1ನ್ನು ವಾದಿ ಬರೆದುಕೊಟ್ಟ ಹಾಗೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.